ಯಾವುದೋ ಒಂದು ಮಾಂತ್ರಿಕ ಶಕ್ತಿ ಮುದುಕನಿಗೆ ಗ್ಯಾಲರಿಯ ಗಾಜಿನ ಬಾಗಿಲನ್ನು ದೂಡಿ ಒಳ ಹೋಗುವಂತೆ ಪ್ರೇರೇಪಿಸಿತು. ಒಳಗೆ ನೆಲದ ಮೇಲೆ ಮೆತ್ತನೆಯ ದಪ್ಪದಾದ ಕಾರ್ಪೆಟನ್ನು ಹಾಸಲಾಗಿತ್ತು. ಹೊರಗಿಲ್ಲದ ಬೆಚ್ಚನೆಯ ವಾತಾವರಣ ಅವನಿಗೆ ಮುದ ನೀಡಿತು. ಉಚ್ಚವರ್ಗದ ಜನರು ಕೈಯಲ್ಲಿ ಕಲಾಕೃತಿಗಳ ಬ್ರೋಶರ್‌ಗಳನ್ನು ಹಿಡಿದುಕೊಂಡು ಮೇಲೆ ಕೆಳಗೆ ಓಡಾಡುತ್ತಿದ್ದರು. ಒಂದು ಅಪರಿಚಿತ ಲೋಕವನ್ನು ಪ್ರವೇಶಿಸಿದಂತೆ ಡ್ರಿಯೋಲಿ ಅಲ್ಲೇ ನಿಲ್ಲುವುದೋ ಇಲ್ಲ ಮುಂದಕ್ಕೆ ಹೋಗುವುದೋ ಎಂಬ ಗೊಂದಲಕ್ಕೆ ಸಿಕ್ಕು ಕಕ್ಕಾಬಿಕ್ಕಿಯಾಗಿದ್ದ.

"ಹೇಯ್, ಯಾರು ನೀನು?" ಯಾರೋ ಅಧಿಕಾರವಾಣಿಯಿಂದ ಅವನನ್ನು ಕೇಳಿದರು.

ಡ್ರಿಯೋಲಿ ಬಾಯ್ದೆರೆದು ಸುಮ್ಮನೆ ನಿಂತುಕೊಂಡ.

"ಗೆಟಾವ್ಟ್!"

"ಈ ಪೇಂಟಿಂಗ್ಸ್ ನೋಡಲು ನನಗೆ ಅವಕಾಶವಿಲ್ಲವೇ?" ಅವನು ಗೋಗರೆಯುವ ದನಿಯಲ್ಲಿ ಕೇಳಿಕೊಂಡ.

"ನಿನ್ನ ಕತ್ತು ಹಿಡಿದು ಹೊರಗೆ ದಬ್ಬುವ ಮೊದಲು ಇಲ್ಲಿಂದ ಜಾಗ ಖಾಲಿ ಮಾಡು." ಅವನು ಮತ್ತೊಮ್ಮೆ ಗರ್ಜಿಸಿದ. ಡ್ರಿಯೋಲಿಗೆ ಒಮ್ಮೆಲೆ ಸಿಟ್ಟು ನೆತ್ತಿಗೇರಿತು.

"ಇಲ್ಲೀಗ ನಾಟಕ ಶುರು ಮಾಡಬೇಡ!" ಅವನ ತನ್ನ ದಪ್ಪನೆಯ ಕೈಯನ್ನು ಡ್ರಿಯೋಲಿಯ ಭುಜದ ಮೇಲಿರಿಸಿ ಕೆಂಗಣ್ಣು ಬೀರಿದ. ಹಾಗೆಯೇ ಹೊರ ಬಾಗಿಲ ಕಡೆಗೆ ಅವನನ್ನು ದೂಡತೊಡಗಿದ.

ಡ್ರಿಯೋಲಿ ತಿರುಗಿ ಬಿದ್ದ.

"ಏಯ್, ನನ್ನ ಭುಜದ ಮೇಲಿಂದ ತೆಗೆಯೋ ನಿನ್ನ ಕೊಳಕು ಕೈನ." ಡ್ರಿಯೋಲಿ ಸಿಟ್ಟಿನಿಂದ ಅವನ ಕೈಯನ್ನು ಕಿತ್ತೆಸೆದ. ನಿಶ್ಶಬ್ದವಾಗಿದ್ದ ಗ್ಯಾಲರಿಯೊಳಗೆ ಅವನ ಧ್ವನಿ ಪ್ರತಿಧ್ವನಿಸಿತು. ಸುತ್ತಲೂ ಇದ್ದವರು ಒಮ್ಮೆಲೇ ತಟಸ್ಥರಾಗಿ ನಿಂತು ಅವರ ಕಡೆಗೆ ನೋಡಿದರು. ಅಷ್ಟರಲ್ಲಿ ದೂರದಲ್ಲಿದ್ದ ಮತ್ತೊಬ್ಬ ಅಟೆಂಡರ್ ಅಲ್ಲಿಗೆ ಓಡೋಡಿ ಬಂದ. ಅವರಿಬ್ಬರೂ ಸೇರಿ ಡ್ರಿಯೋಲಿಯನ್ನು ಹೊರಗೆ ತಳ್ಳಲು ಪ್ರಯತ್ನಿಸತೊಡಗಿದರು... ಕಲಾಕೃತಿಗಳನ್ನು ವೀಕ್ಷಿಸಲು ಬಂದಿದ್ದ ಜನರು ಕುತೂಹಲದಿಂದ ಇತ್ತ ಗಮನ ಹರಿಸಿದರು.

"ನನ್ನ ಏನಂತ ತಿಳ್ಕೊಂಡಿದ್ದಿರಿ? ನಾನೇನೂ ಭಿಕ್ಷುಕನಲ್ಲ. ಈ ಕಲಾಕಾರನ ಚಿತ್ರ ನನ್ನ ಬಳಿಯೂ ಇದೆ." ಡ್ರಿಯೋಲಿ ಎಲ್ಲರಿಗೂ ಕೇಳಿಸುವಂತೆ ದೊಡ್ಡ ದನಿಯಲ್ಲಿ ಹೇಳಿದ. "ಅಷ್ಟೇ ಅಲ್ಲ, ಈ ಪೇಂಟಿಂಗ್ಸ್‌ಗಳನ್ನು ರಚಿಸಿದ್ದ ಸೂಟಿನ್ ನನ್ನ ಗೆಳೆಯನೂ ಆಗಿದ್ದ!"

"ಯಾರೋ ಹುಚ್ಚನಿರಬೇಕು! ಸೂಟಿನನ ಗೆಳೆಯನಂತೆ!!"

"ಪೊಲೀಸರನ್ನು ಕರೆಸೋಣ."

ಡ್ರಿಯೋಲಿ ಒಮ್ಮೆಲೇ ಅವರಿಂದ ಬಿಡಿಸಿಕೊಂಡು, "ಅವನ ಚಿತ್ರ ನನ್ನ ಬಳಿಯೂ ಇದೆ, ನೋಡ್ರೋ..." ಎನ್ನುತ್ತಾ ಹಾಲಿನೊಳಗೆ ಓಡುತ್ತಾ ತನ್ನ ಓವರ್ ಕೋಟು, ಕೋಟು ಮತ್ತು ಶರಟನ್ನು ಬಿಚ್ಚಿ ಅಲ್ಲಿದ್ದವರಿಗೆಲ್ಲಾ ತನ್ನ ನಗ್ನ ಬೆನ್ನನ್ನು ತೋರಿಸಿದ.

ಗ್ಯಾಲರಿಯೊಳಗೆ ಒಮ್ಮೆಲೇ ಗಾಢ ಮೌನ ಕವಿಯಿತು. ಅವರೆಲ್ಲಾ ದಿಗ್ಮೂಢರಾಗಿದ್ದರು. ಕಾಲದ ಹೊಡೆತಕ್ಕೆ ಡ್ರಿಯೋಲಿಯ ಬೆನ್ನು ಕೃಶಗೊಂಡು ಸುಕ್ಕಾಗಿತ್ತು. ಭುಜದ ಮೂಳೆಗಳು ಎದ್ದು ಕಾಣುತ್ತಿದ್ದವು. ಚರ್ಮ ಸುಕ್ಕುಗಟ್ಟಿದ್ದರಿಂದ ರೂಪದರ್ಶಿ ಜೋಸಿ ಕೂಡ ಮುದುಕಿಯಂತೆ ಕಾಣಿಸುತ್ತಿದ್ದಳು. ಆದರೆ, ಬಣ್ಣ ಮಾತ್ರ ಕಿಂಚಿತ್ತೂ ಮಾಸಿರಲಿಲ್ಲ. ಸೂಟಿನನ ಮಾಂತ್ರಿಕ ಶೈಲಿ ಒಂದಿನಿತೂ ಕಳೆಗುಂದಿರಲಿಲ್ಲ.

"ಇದು ನೂರಕ್ಕೆ ನೂರು ಸೂಟಿನನ ಚಿತ್ರವೇ ಸೈ!!" ಬಹಳ ಜನ ಆಶ್ಚರ್ಯದಿಂದ ಉದ್ಗರಿಸಿದರು.